# ಚಿತ್ರ ರಾಮಾಯಣ



ಸುಮಾರು 50 ವರ್ಷಗಳ ಹಿಂದೆ ನಮ್ಮ ಅಜ್ಜಿ ಸುಭದ್ರಮ್ಮ ರಾಮಚಂದ್ರರಾವ್ ಅವರು ಕರಿಬಣ್ಣದ ಇಂಡಿಯನ್ ಇಂಕ್ ಉಪಯೋಗಿಸಿ ಆ ಕಾಲದಲ್ಲಿ ಸಿಗುತ್ತಿದ್ದ ಬ್ರೆಡ್ ಬಾಕ್ಸ್‌ನ ಮುಚ್ಚಳಗಳ ಮೇಲೆ ರಾಮಾಯಣದ ಮುಖ್ಯ ಘಟನೆಗಳನ್ನು ಚಿತ್ರಿಸುತ್ತಿದ್ದರು. ಅದರ ಚಿತ್ರವೇ ಇದು. ಇಂತಹದ್ದೇ ಒಟ್ಟು 12 ಚಿತ್ರಗಳಿದ್ದು, ಈ ಪೈಕಿ ಒಂದಕ್ಕೆ ಮಾತ್ರ ಬಣ್ಣ ತುಂಬಿಸಿದ್ದಾರೆ. ಪುತ್ರಕಾಮೇಷ್ಟಿ ಯಾಗದಲ್ಲಿ ಪಾಯಸ ಕೊಡುವ ಚಿತ್ರದಿಂದ ಪ್ರಾರಂಭವಾಗಿ, ಸೀತಾ ಕಲ್ಯಾಣ, ಚಿತ್ರಕೂಟದ ಮಾಯಾಜಿಂಕೆ, ಸುಗ್ರೀವ ಸ್ನೇಹ ಸಂದೇಶ ಸಾರುವ ರಾಮಾಯಣದ ಮುಖ್ಯ ಘಟನೆಗಳ ಹಲವಾರು ಚಿತ್ರಗಳಿವೆ. ರಾಮಾಯಣವು ವಿಭೀಷಣನ ಪಟ್ಟಾಭಿಷೇಕದೊಂದಿಗೆ ಕೊನೆಯಾಗುತ್ತದೆ. ಬಣ್ಣ ಹಾಕಿರುವ ಚಿತ್ರ ಕ್ಷೀರಸಾಗರದಲ್ಲಿ ಆದಿಶೇಷನ ಮೇಲೆ ಮಲಗಿರುವ ಶ್ರೀ ವಿಷ್ಣುವಿನದ್ದು. ಇದು ವಿಶೇಷವಾಗಿ ಕಾಣುತ್ತದೆ. ಅಷ್ಟೂ ಚಿತ್ರಗಳು ತುಂಬಾ ಸುಂದರವಾಗಿವೆ. ಇವುಗಳನ್ನು ರಾಮನವಮಿಯಲ್ಲಿ ಪ್ರತಿವರ್ಷ ಇಟ್ಟು ಪೂಜೆ ಮಾಡುತ್ತಾ ನಮ್ಮ ತಾಯಿಯವರು ಕಾಪಾಡಿಕೊಂಡು ಬಂದಿದ್ದಾರೆ.

—ಅಂಬಿಕಾ ಆರ್., ಬೆಂಗಳೂರು

# ಸೌರ ಉಪಗ್ರಹ ಹಸ್ತಕ್ಷೇಪ

ಟೀವಿ ನೋಡುವ ಸಂದರ್ಭದಲ್ಲಿ ಅಚಾನಕ್ಕಾಗಿ ಪರದೆ ಮೇಲೆ ಸಂದೇಶವೊಂದು (ಮೇಲಿನ ಚಿತ್ರದಲ್ಲಿ ತೋರಿಸಿದಂತೆ) ಗೋಚರಿಸಿತು. ಇದು ಪ್ರತಿ ವರ್ಷ ಒಂದೆರಡು ಬಾರಿ ಎದುರಾಗುವ ಸಾಮಾನ್ಯ ಸಮಸ್ಯೆಯೆಂದು ತಿಳಿಯಿತು. ಇದನ್ನು 'ಸೌರ ಉಪಗ್ರಹ ಹಸ್ತಕ್ಷೇಪ' ಎಂತಲೂ ಕರೆಯುವುದುಂಟು. ಯಾವುದೇ ಡಿಟಿಎಚ್ ಪೂರೈಕೆದಾರರಿಗೆ ಕೇಬಲ್ ಸಂಕೇತಗಳನ್ನು ರವಾನಿಸುವ ಉಪಗ್ರಹಗಳ ಹಿಂದೆ ಸೂರ್ಯ ನೇರವಾಗಿ ಹಾದುಹೋಗುವಾಗ ಈ ಸಂಕ್ಷಿಪ್ತ ನಿಲುಗಡೆ ಸಂಭವಿಸುತ್ತದೆ. ಸೂರ್ಯನನ್ನು ಹರಡುವ ಉಪಗ್ರಹದೊಂದಿಗೆ ಜೋಡಿಸಿದಾಗ, ಸೂರ್ಯನಿಂದ ಹೊರಸೂಸುವ ಸೌರ ವಿಕಿರಣವು ಉಪಗ್ರಹದ ಸಂಕೇತವನ್ನು ಅಡ್ಡಿಪಡಿಸುತ್ತದೆ ಮತ್ತು ಸಂಕ್ಷಿಪ್ತ ಸಿಗ್ನಲ್ ನಿಲುಗಡೆಗೆ ಕಾರಣವಾಗುತ್ತದೆ.

ಉಪಗ್ರಹ ಟೀವಿ ಗ್ರಾಹಕರಿಗೆ, ಅನಿರೀಕ್ಷಿತವಾಗಿ ಈ ಕ್ರಿಯೆ ಅಡ್ಡಿಪಡಿಸುತ್ತದೆ. ಡಿಟಿಎಚ್ ಟೀವಿ ಗ್ರಾಹಕರು ವಸಂತ ಮತ್ತು ಶರತ್ಕಾಲದಲ್ಲಿ ಮಾತ್ರ ಈ ರೀತಿಯಾದ ಕ್ರಿಯೆ ಅರ್ಥಾತ್ ಸನ್ ಔಟೇಜ್ ಸಮಸ್ಯೆಯನ್ನು ಎದುರಿಸುತ್ತಾರೆ. ಇದು ಒಂದು ಸೋಜಿಗದ ಸಂಗತಿಯೂ ಹೌದು.

—ವಿಜಯಕುಮಾರ್ ಎಚ್.ಕೆ., ರಾಯಚೂರು






# ಕೃಷ್ಣನ ಗೋವರ್ಧನ ಗಿರಿ ರೂಪ

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದಲ್ಲಿನ ಚನ್ನಕೇಶವ ದೇವಾಲಯದ ಹೊರ ಗೋಡೆಯ ಮೇಲಿರುವ ಚಿತ್ರವಿದು.

ದ್ವಾಪರಯುಗದಲ್ಲಿ ಗೊಲ್ಲರು ಗೋವರ್ಧನ ಗಿರಿಯನ್ನು ಪೂಜಿಸುವಾಗ ಕೋಪಗೊಂಡ ಇಂದ್ರನು ಸುರಿಸಿದ ಘೋರ ಮಳೆಯಿಂದ ಗೊಲ್ಲರನ್ನು ರಕ್ಷಿಸಲು ಶ್ರೀಕೃಷ್ಣ ಕಿರುಬೆರಳಿನಿಂದ ಗೋವರ್ಧನ ಗಿರಿಯನ್ನು ಎತ್ತಿದನಂತೆ. ಆ ಪವಾಡದ ರೂಪಕವನ್ನು ಇಲ್ಲಿ ಕೆತ್ತಲಾಗಿದೆ. ಅಂದಹಾಗೆ ದೇವಾಲಯವು ಶಿಥಿಲಾವಸ್ಥೆಯಲ್ಲಿರುವುದು ದುರಂತದ ವಿಚಾರ.

—ದೆಗ್ಗನಹಳ್ಳಿ ಆನಂದ್,
ಕೆ.ಆರ್. ನಗರ